# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ- ಕಾರಾಗೃಹ ಇಲಾಖೆಯಲ್ಲಿನ ಸಿಬ್ಬಂದಿಯವರಿಗೆ ನಗದು ಬಹುಮಾನಗಳನ್ನು ನೀಡುವ ಬಗ್ಗೆ.

ಓದಲಾಗಿದೆಃ- ಕಾರಾಗೃಹ ಇಲಾಖಾ ಮುಖ್ಯಸ್ಥರ ಪತ್ರಗಳ ಸಂಖ್ಯೆ: ಡಿಜಿಪಿ/ಪಿಇಎಸ್/ನಬ/ಸಿಆರ್-1/2016, ದಿನಾಂಕ:31/03/2016, ಇಎಸ್‌ಟಿ 1/ಸಿಆರ್-39/2016-17, ದಿನಾಂಕ:10/05/2016 ಮತ್ತು ಇಎಸ್‌ಟಿ 1/ಸಿಆರ್-60/2016-17, ದಿನಾಂಕ:30/08/2017.

*****

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರಗಳಲ್ಲಿ ಪೋಲೀಸ್ ಇಲಾಖೆಯಲ್ಲಿ ಇರುವಂತೆ ಕಾರಾಗೃಹ ಇಲಾಖೆಯಲ್ಲಿನ ಸಿಬ್ಬಂದಿಯವರಿಗೆ ನಗದು ಬಹುಮಾನ ನೀಡುವ ಪದ್ಧತಿ ಜಾರಿ ಮಾಡುವಂತೆ ಕೋರಿ ಕಾರಾಗೃಹಗಳ ಇಲಾಖಾ ಮುಖ್ಯಸ್ಥರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಕಾರಾಗೃಹ ಇಲಾಖೆಯು ಅತೀ ಸೂಕ್ಷ್ಮ ಇಲಾಖೆಯಾಗಿದ್ದು, ದಾಖಲಾಗುವ ಜೀವಾವಧಿ ಶಿಕ್ಷಾ, ಗೂಂಡಾ, ರೂಢಾಪರಾಧಿ ಬಂದಿಗಳು ಸೇರಿದಂತೆ ವಿವಿಧ ರೀತಿಯ ಬಂದಿಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವುದು ಕಾವಲು ಸಿಬ್ಬಂದಿಗಳ ಕರ್ತವ್ಯವಾಗಿರುತ್ತದೆ. ಯಾವುದೇ ಲೋಪದೋಷಗಳಿಲ್ಲದೆ ಉತ್ತಮವಾಗಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರನ್ನು ಪ್ರೋತ್ಸಾಹಿಸಿ, ಅವರುಗಳ ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಪೋಲೀಸ್ ಇಲಾಖೆಯಲ್ಲಿ ಜಾರಿಯಲ್ಲಿರುವ ನಗದು ಬಹುಮಾನ ನೀಡುವ ಪದ್ಧತಿಯನ್ನು ಕಾರಾಗೃಹ ಇಲಾಖೆಯ ಸಿಬ್ಬಂದಿಯವರಿಗೂ ಸಹ ಜಾರಿಗೊಳಿಸಿ, ಈ ಕೆಳಗೆ ವಿವರಿಸಿದಂತೆ ಇಲಾಖಾ ಮುಖ್ಯಸ್ಥರು, ವಿಭಾಗೀಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಹಣಕಾಸು ಅಧಿಕಾರವನ್ನು ಪ್ರತ್ಯಾಯೋಜಿಸಿ ಆದೇಶಿಸುವಂತೆ ಕೋರಿರುತ್ತಾರೆ.

| ಕಾರಾಗೃಹ ಇಲಾಖೆಯ ಮುಖ್ಯಸ್ಥರು ವಿಭಾಗೀಯ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ | | | | | |
|---|---|---|---|---|---|
| | | ಇಲಾಖಾ ಮುಖ್ಯಸ್ಥರು | ವಿಭಾಗೀಯ ಅಧಿಕಾರಿ | ಜಿಲ್ಲಾ ಮಟ್ಟದ ಅಧಿಕಾರಿ | ಉಪ ವಿಭಾಗೀಯ ಅಧಿಕಾರಿ |
| ಕ್ರ.ಸಂ. | ವಿಷಯ | ಪೋಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು/ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು | ಕಾರಾಗೃಹಗಳ ಉಪಮಹಾನಿರೀಕ್ಷಕರು (ಐ.ಪಿ.ಎಸ್)/ ಕಾರಾಗೃಹಗಳ ಹೆಚ್ಚುವರಿ ಇನ್ಸ್‌ಪೆಕ್ಟರ್ | ಮುಖ್ಯ ಅಧೀಕ್ಷಕರು /ಪ್ರಾಂಶುಪಾಲರು, ಪಿ.ಟಿ.ಐ., ಮೈಸೂರು/ /ಕೇಂದ್ರ ಕಾರಾಗೃಹಗಳ ಅಧೀಕ್ಷಕರು | ಜಿಲ್ಲಾ ಕಾರಾಗೃಹಗಳ ಸಹಾಯಕ ಅಧೀಕ್ಷಕರು |
| 1. | ಕಾರಾಗೃಹ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ನಗದು ಬಹುಮಾನ ಮಂಜೂರಾತಿ | ಪ್ರತಿ ಸಿಬ್ಬಂದಿಗೆ ರೂ. 10,000/-ಗಳಂತೆ ವಾರ್ಷಿಕ ರೂ.25.00 ಲಕ್ಷಗಳು | ಪ್ರತಿ ಸಿಬ್ಬಂದಿಗೆ ರೂ. 8.000/-ಗಳಂತೆ ವಾರ್ಷಿಕ ರೂ.3.00 ಲಕ್ಷಗಳು | ಪ್ರತಿ ಸಿಬ್ಬಂದಿಗೆ ರೂ. 5.000/-ಗಳಂತೆ ವಾರ್ಷಿಕ ರೂ.2.00 ಲಕ್ಷಗಳು | ಪ್ರತಿ ಸಿಬ್ಬಂದಿಗೆ ರೂ. 5.000/-ಗಳಂತೆ ವಾರ್ಷಿಕ ರೂ.1.00 ಲಕ್ಷಗಳು |

<u>ಪ್ರತಿ :-</u>

1] ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು (ಪಿಸಿಎಎಸ್), ಇವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

2] ಸರ್ಕಾರದ ಉಪ ಕಾರ್ಯದರ್ಶಿಯವರು (ಕಾನೂನು ಮತ್ತು ಸುವ್ಯವಸ್ಥೆ), ಇವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

3] ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ) ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

4] ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

3. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 58 ಪಿಆರ್‌ಇ 2016**
**ಬೆಂಗಳೂರು, ದಿನಾಂಕ: 23/01/2018**

3.1 ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರಾಗೃಹ ಇಲಾಖೆಯ ಸಿಬ್ಬಂದಿಗಳಿಗೆ ನಗದು ಬಹುಮಾನ ನೀಡಲು ಇಲಾಖೆಯ ಅಧಿಕಾರಿಗಳಿಗೆ ಈ ಕೆಳಕಂಡಂತೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

| ಕಾರಾಗೃಹ ಇಲಾಖೆಯ ಮುಖ್ಯಸ್ಥರು ವಿಭಾಗೀಯ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ | | | | | |
|---|---|---|---|---|---|
| | | ಇಲಾಖಾ ಮುಖ್ಯಸ್ಥರು | ವಿಭಾಗೀಯ ಅಧಿಕಾರಿ | ಜಿಲ್ಲಾ ಮಟ್ಟದ ಅಧಿಕಾರಿ | ಉಪ ವಿಭಾಗೀಯ ಅಧಿಕಾರಿ |
| ಕ್ರ.ಸಂ. | ವಿಷಯ | ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು/ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು | ಕಾರಾಗೃಹಗಳ ಉಪಮಹಾನಿರೀಕ್ಷಕರು (ಐ.ಪಿ.ಎಸ್)/ಕಾರಾಗೃಹಗಳ ಹೆಚ್ಚುವರಿ ಮಹಾನಿರೀಕ್ಷಕರು | ಮುಖ್ಯ ಅಧೀಕ್ಷಕರು /ಪ್ರಾಂಶುಪಾಲರು, ಪಿ.ಟಿ.ಐ., ಮೈಸೂರು/ /ಕೇಂದ್ರ ಕಾರಾಗೃಹಗಳ ಅಧೀಕ್ಷಕರು | ಜಿಲ್ಲಾ ಕಾರಾಗೃಹಗಳ ಸಹಾಯಕ ಅಧೀಕ್ಷಕರು |
| 1. | ಕಾರಾಗೃಹ ಇಲಾಖೆಯ ಅಧಿಕಾರಿ/ಸಿಬ್ಬಂದಿ ಗಳಿಗೆ ನಗದು ಬಹುಮಾನ ಮಂಜೂರಾತಿ | ಪ್ರತಿ ಸಿಬ್ಬಂದಿಗೆ ಗರಿಷ್ಠ ರೂ. 2,000/-ಗಳಂತೆ ಪ್ರತಿ ಸಂದರ್ಭದಲ್ಲಿ ಗರಿಷ್ಠ ರೂ.30,000/-ಗಳು | ಪ್ರತಿ ಸಿಬ್ಬಂದಿಗೆ ಗರಿಷ್ಠ ರೂ. 1,000/-ಗಳಂತೆ ಪ್ರತಿ ಸಂದರ್ಭದಲ್ಲಿ ಗರಿಷ್ಠ ರೂ.10,000/-ಗಳು | ಪ್ರತಿ ಸಿಬ್ಬಂದಿಗೆ ಗರಿಷ್ಠ ರೂ. 750/-ಗಳಂತೆ ಪ್ರತಿ ಸಂದರ್ಭದಲ್ಲಿ ಗರಿಷ್ಠ ರೂ.7,500/-ಗಳು | ಪ್ರತಿ ಸಿಬ್ಬಂದಿಗೆ ಗರಿಷ್ಠ ರೂ. 500/-ಗಳಂತೆ ಪ್ರತಿ ಸಂದರ್ಭದಲ್ಲಿ ಗರಿಷ್ಠ ರೂ.5,000/-ಗಳು |

3.2 ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2056-00-101-0-01 ಸೆರೆಮನೆಗಳು 059 ಇತರೆ ಖರ್ಚಿನಲ್ಲಿ ಭರಿಸತಕ್ಕದ್ದು.

3.3 ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 342 ವೆಚ್ಚ-11, 2017 ದಿನಾಂಕ:16/01/2018 ರಲ್ಲಿ ನೀಡಲಾದ ಸಹಮತದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. R. Shobha
(ಎಂ.ಆರ್.ಶೋಭಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಗೆ,

1] ಮಹಾಲೇಖಪಾಲರು (ಜಿ&ಎಸ್‌ಎಸ್‌ಎ, ಇ & ಆರ್‌ಎಸ್‌ಎ, ಎ&ಇ), ಕರ್ನಾಟಕ ಬೆಂಗಳೂರು.
2] ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಕಛೇರಿ ಶೇಷಾದ್ರಿ ರಸ್ತೆ, ಬೆಂಗಳೂರು.
3] ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.